ಬಸವರಾಜ ಹೊನಬಾಂಡೆ, ಅಥಣಿ
ಯೌವನ ಹಾಗೂ ಪೆಟ್ರೋಲ್‌ಗೆ ಇರುವ ವ್ಯತ್ಯಾಸ?



ದಿನಗಳೆದಂತೆ ಯೌವನದ ಬೆಲೆ ಇಳಿಯುತ್ತದೆ; ಪೆಟ್ರೋಲ್ ಬೆಲೆ ಏರುತ್ತದೆ!

ಕೊಕ್ಕಡ ವೆಂಕಟ್ರಮಣಭಟ್, ಮಂಡ್ಯ
ನೊಬೆಲ್ ಪುರಸ್ಕಾರವನ್ನು ನೊಬೆಲ್ ಪ್ರೈಝ್ ಎಂದೇಕೆ ಕರೆಯುತ್ತಾರೆ? ಅದು ಸ್ಪರ್ಧೆ ನಡೆಸಿ ನೀಡಿದ ಬಹುಮಾನವಲ್ಲ, ಪ್ರಶಸ್ತಿಯಲ್ಲವೇ? ಉತ್ತರಿಸದಿದ್ದರೆ ವೆಂಕಟ್ರಮಣನೊಂದಿಗೆ ರಾಮನಿಗೂ ತಿರುಪತಿ ಗೂಟನಾಮವೇ ಗತಿ!
Prize ತಪ್ಪು; praise ಸರಿ; ಪ್ರಶಸ್ತಿ ಎನ್ನಲ್ ಪೊಗಳಿಕೆ, ಕೀರ್ತಿಶ್ಲಾಘನೆ ಎಂಬರ್ಥೈ ಗೂಟನಾಮಿಗಳೇ!

ಮಹಾವೀರ ಕಾಸಾರ, ಚನ್ನಗಿರಿ
ರಾವಣನಿಗೆ ಹತ್ತು ಬಾಯಿ, ಒಂದು ಹೊಟ್ಟೆ; ರಾಜಕಾರಣಿಗಳಿಗೆ?



ಒಂದೇ ಬಾಯಿ, ಒಂದೇ ಹೊಟ್ಟೆ; ಆದರೆ ಆ ಹೊಟ್ಟೆ ತಳವಿಲ್ಲದ್ದು!

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ
ಗಂಡು ಮದುವೆ ಆಗುವತನಕ ಕರೆಂಟ್ ಬಲ್ಬು, ನಂತರ ಮೇಣದ ಬತ್ತಿ; ಮಕ್ಕಳಾದ ಮೇಲೆ?
ಟ್ಯೂಬ್‌ಲೈಟು!

ರವಿ ಭಟ್, ಬೆಂಗಳೂರು
ಹಳದಿ ಎಲೆಗಳನ್ನು ನೋಡಿ ಹಸಿರು ಎಲೆಗಳು ನಗುತ್ತಾ ಇರುದಂತೆ; ಹೌದೇ?
ಹಸಿರಿಗೆ ನಗೆ, ಹಳದಿಗೆ ಗಂಭೀರತೆಯೇ ಚೆನ್ನ.

ಎ.ಎಸ್. ಸ್ವಾಮಿ, ಶೋರಾಪುರ
ವಿವೇಕಕ್ಕೂ, ಅವಿವೇಕಕ್ಕೂ ಇರುವ ಅಂತರವೇನು?
ಕೃಷ್ಣ–ಶಕುನಿಯರ ಅಂತರ; ಬುದ್ಧಿ ಅಷ್ಟೇ ಇದ್ದರೂ ಪಕ್ಷದ ಆಯ್ಕೆಯಲ್ಲಿನ ಅಂತರ!

ಅರ್ಜುನ ಎ. ಮಂಡ್ಯ
ರಾಜರಿಗೂ, ರಾಜಕಾರಣಿಗೂ ಇರುವ ವ್ಯತ್ಯಾಸವೇನು?
ರಾಜಾ ಪ್ರತ್ಯಕ್ಷ ದೇವತಾ; ರಾಜಕಾರಣಿ ಪ್ರತ್ಯಕ್ಷ ಭೂತ!

ರಘುನಾಥರಾವ್ ತಾಪ್ಸೆ, ದಾವಣಗೆರೆ
ನೌಕರಿಯಲ್ಲಿದ್ದವರಿಗೆ ಪಿಂಚಣಿ; ವಿವಾಹವಾದಂದಿನಿಂದ ಮನೆಕೆಲಸ ಮಾಡುವ ಹೆಂಡತಿಗೆ?
ಸಂಬಳ ಇದ್ದವರಿಗೆ ಪಿಂಚಣಿ, ಮನೆಕೆಲಸಕ್ಕೆ ಸಂಬಳವೇ ಇಲ್ಲದ್ದರಿಂದ ಪಿಂಚಣಿಯೂ ಇಲ್ಲ!

ಎ. ಹಮೀದ್, ವಿಟ್ಲ
ಗಂಡು ತೆರೆದ ಪುಸ್ತಕವಾದ್ರೆ, ಹೆಣ್ಣು?
ಆ ಪುಸ್ತಕದಲ್ಲಿನ ಪುಟಪುಟಗಳಲ್ಲೂ ಕಾಣಬರುವ ವಿಷಯ.

ಎನ್.ಎಂ. ಪೈ. ಕಾಸರಗೋಡ
ದೇವರು ಸರ್ವಾಂತರ್ಯಾಮಿಯಾದರೂ ಕಣ್ಣಿಗೇಕೆ ಕಾಣುವುದಿಲ್ಲ?
ಪೀಡಿಸುವ ಭಕ್ತರಿಂದ ದೂರವಿರಲು!

ಕೆ. ಮಲ್ಲೇಶ, ಕೊಡಸೋಗೆ
ಪ್ರೀತಿಯ ವಿಷಯದಲ್ಲಿ ಮೊದಲು ಹಳ್ಳಕ್ಕೆ ಬೀಳುವವರು ಹುಡುಗರೋ ಅಥವಾ ಹುಡುಗಿಯರೋ?
ಹುಡುಗರೇ; ಹುಡುಗಿಯರು ತೋಡುತ್ತಾರೆ, ಇವರು ಬೀಳುತ್ತಾರೆ.

ರಮೇಶ್, ಹನುಮನಾಳು
ಅತ್ತರೆ ಸತ್ತವರು ಮತ್ತೆ ಬರುವುದಿಲ್ಲವೆಂದು ತಿಳಿದಿದ್ದರೂ ಅಳುವುದೇಕೆ?
ಮುಂದೆ ನನ್ನ ಗತಿಯೇನು? ಎಂಬ ಸ್ವಾರ್ಥವೇ ಅಳುವಿನ ಮೂಲ. ಸತ್ತವರಿಗಾಗಿ ಅಳುವವರು ವಿರಳ.

ಜೆ.ಎಂ. ಶಶಿಕಲಾ ವಿಶ್ವನಾಥ್, ಬಾಣೂರು
ನಮ್ಮೆಲ್ಲರಲ್ಲೂ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರ ಗುಣಧರ್ಮಗಳು ಇವೆಯಂತೆ, ಹೌದಾ?
ಅಲ್ಲದೆ ರಾಕ್ಷಸೀಗುಣಗಳೂ ಇರುತ್ತವೆ. ಮಾನವ ಸಕಲ ಗುಣಾವಗುಣಗಳ ಮೊತ್ತ!

## ಬಹುಮಾನಿತ ಪ್ರಶ್ನೆ

ಚಂದ್ರಶೇಖರ್, ಗೌರಿಬಿದನೂರು
ಕೆಲವು ಎಫ್ ಎಂ ರೇಡಿಯೋಗಳಲ್ಲಿ ಸಖತ್ ಹಾಟ್ ಮಗಾ, ಚಮ್ಕಾಯ್ಸು, ಚಿಂದಿ ಉಡಾಯ್ಸು ಇತ್ಯಾದಿಗಳಿಂದ ಕನ್ನಡವನ್ನು ಗಬ್ಬೆಬ್ಬಿಸುತ್ತಿದ್ದಾರೆ; ನಿಜಕ್ಕೂ ಇದ್ಯಾವ ಸೀಮೆ ಕನ್ನಡವೋ..?
ಸೀಮೆ ಮೀರಿದ ಕನ್ನಡವೇ ಹೌದು; ಕನ್ನಡಿಗರು ಬರಿದೇ ನವೆಂಬರ್ ಕನ್ನಡಿಗರಾಗಿರುವವರೆಗೂ ಇದು ತಪ್ಪಿದ್ದಲ್ಲ.

ಪಿ.ಎನ್. ಶ್ರೀವತ್ಸ, ಬೆಂಗಳೂರು
ಪತ್ರಿಕೆಗಳ ಬೆಲೆ ಎಂದಾದರೂ ಕಡಿಮೆಯಾಗುವ ಪ್ರಮೇಯ ಬರಬಹುದೆ?
ಈಗಲೇ ಬಂದಿದೆಯಲ್ಲಾ! ಹಲವಾರು ಪತ್ರಿಕೆಗಳು ತಮ್ಮ ಬೆಲೆ ಕಳೆದುಕೊಂಡಿವೆ!

ಎಸ್.ಎನ್. ಮಹಾಬಲರಾವ್, ನರಸಿಂಹರಾಜಪುರ
ಅಪ್ಪ ಬದಲು ಪಪ್ಪ ಯಾಕೆ?
ಅದು ಬೆಪ್ಪ ಎಂಬುದರ ತತ್ಸಮವಂತೆ!

ಬಿ.ಪಿ. ವೆಂಕಟೇಶ್, ಬೋಧನಹೊಸಹಳ್ಳಿ
ಪ್ರೀತಿಸುವವರೆಲ್ಲಾ ಮದುವೆಯಾದರೆ?



ಮದುವೆಯಾದವರನ್ನೇ ಪ್ರೀತಿಸಬೇಕಾಗುತ್ತದೆ ಅಷ್ಟೆ.

ಶಿರಾಲಿ ದೀಪಕ್ ಆರ್. ಶೇಟ್, ಬೆಂಗಳೂರು
ಆಟೋಗಳಿಗೆ ಏಕೆ ಈಗ ಹಸಿರು ಬಣ್ಣ? ಅಣ್ಣ ಬೇಗ ಹೇಳಣ್ಣ!
ಮರಗಿಡಗಳಂತೆಯೇ ಇವೂ ಎಲ್ಲಿಗೆ ಕರೆದರೂ ಬಾರದೆ ನಿಂತಲ್ಲಿಯೇ ನಿಂತಿರುವುದರಿಂದ!

ಕುಮಾರ ಚಲವಾದಿ, ಹೊಳೆನರಸಿಪುರ
ಹೋಮ-ಹವನಗಳಿಂದ ವಿರೋಧಿಗಳನ್ನು ಸುಲಭವಾಗಿ ಮಟ್ಟ ಹಾಕಬಹುದೆ?
ಹಾಗಿದ್ದಿದ್ದರೆ ವಿಶ್ವಾಮಿತ್ರರೇಕೆ ರಾಮನ ಸಹಾಯ ಬಯಸುತ್ತಿದ್ದರು? ಹೋಮದಿಂದ ಹೆಚ್ಚೆಂದರೆ ಕೆಲವು ಕೀಟಗಳು ನಾಶಗೊಂಡಾವಷ್ಟೆ.

■ ರಾಮ್